# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **737** |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಾಲಿ ಇರುವ ವಸತಿ ಸಮುಚ್ಚಯಗಳ ನಿರ್ಮಾಣ ಕಾಮಗಾರಿಗಳ ಹೊರತಾಗಿ ಹೊಸದಾಗಿ ವಸತಿ ಸಮುಚ್ಚಯಗಳ ನಿರ್ಮಾಣ ಮಾಡುವ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆಯೇ; ಇದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಲ್ಲೆಲ್ಲಿ ವಸತಿ ಸಮುಚ್ಚಯಗಳ ನಿರ್ಮಾಣಕ್ಕೆ ಜಾಗ ಗುರುತಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)- ಸರ್ವರಿಗೂ ಎಂಬ ಅಭಿಯಾನದಡಿ ವಸತಿ ಸಮುಚ್ಚಯಗಳ ನಿರ್ಮಾಣ ಮಾಡುವ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ.<br><br>ಹಾಲಿ ಇರುವ ವಸತಿ ಸಮುಚ್ಚಗಳ ನಿರ್ಮಾಣ ಕಾಮಗಾರಿಗಳ ಹೊರತಾಗಿ ಕಳೆದ 3 ವರ್ಷಗಳಿಂದ ಈ ಯೋಜನೆಯಡಿ 33 ಜಾಗ (ಸ್ಥಳ)ಗಳಲ್ಲಿ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡಿ ಒಟ್ಟು 8721 ಮನೆಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ. ಸ್ಥಳೀಯ ಸಂಸ್ಥೆವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) & ರಾಜ್ಯ ವಸತಿ ಯೋಜನೆಗಳ ಸಮನ್ವಯತೆಯೊಂದಿಗೆ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಒಂದು ಲಕ್ಷ ಬೆಂಗಳೂರು ಬಹುಮಹಡಿ ವಸತಿ ಯೋಜನೆ ಯಡಿ ಕಳೆದ 3 ವರ್ಷಗಳಲ್ಲಿ ವಸತಿ ಸಮುಚ್ಚಯಗಳ ನಿರ್ಮಾಣಕ್ಕೆ ಜಾಗವನ್ನು / ಜಮೀನನ್ನು ಕಂದಾಯ ಇಲಾಖೆಯಿಂದ ಮುಫತ್ತಾಗಿ ಮಂಜೂರು ಮಾಡಿದ್ದು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಆ) | ಸರ್ಕಾರದಿಂದ ವಸತಿ ಸಮುಚ್ಚಯ ನಿರ್ಮಾಣಕ್ಕಾಗಿ ಆಯ್ಕೆ ಮಾಡಿಕೊಳ್ಳುವ ಜಾಗಗಳನ್ನು ಗುರುತಿಸಲು ಇರುವ ಮಾನದಂಡಗಳೇನು; (ವಿವರ ನೀಡುವುದು) | ಸ್ಥಳೀಯವಾಗಿ ಲಭ್ಯವಿರುವ ಹಾಗೂ ವಸತಿಗೆ ಯೋಗ್ಯವಾಗಿರುವ ಸರ್ಕಾರಿ ಜಮೀನುಗಳನ್ನು ಉಚಿತವಾಗಿ ನಿಗಮಕ್ಕೆ ಮಂಜೂರು ಮಾಡಲಾಗಿರುತ್ತದೆ.<br><br>ಮಂಜೂರು ಮಾಡಲಾದ ಸರ್ಕಾರಿ ಜಮೀನುಗಳ ಪೈಕಿ ವ್ಯಾಜ್ಯ ಮುಕ್ತ ಹಾಗೂ ತಾಂತ್ರಿಕವಾಗಿ ನಿರ್ಮಾಣಕ್ಕೆ ಯೋಗ್ಯವಾಗಿರುವ ಜಮೀನುಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. |
| ಇ) | ಸರ್ಕಾರಿ ವಸತಿ ಸಮುಚ್ಚಯಗಳ ನಿರ್ಮಾಣ ಕಾಮಗಾರಿ ವಿಳಂಬಕ್ಕೆ ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು) | ಈ ಯೋಜನೆಯಡಿ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ವಸತಿ ಸಮುಚ್ಚಯಗಳ ನಿರ್ಮಾಣ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಒಟ್ಟು 33 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.<br><br>ಸದರಿ ಮನೆಗಳ ನಿರ್ಮಾಣ ಕಾಮಗಾರಿ ಅನುಷ್ಠಾನ ಸಮಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಫಲಾನುಭವಿಗಳಿಂದ ವಂತಿಕೆ ಸಂಗ್ರಹಣೆಯಾಗುವಲ್ಲಿ ಹಾಗೂ ಫಲಾನುಭವಿಗಳಿಗೆ ಬ್ಯಾಂಕ |

| | | |
|---|---|---|
| | | ಸಾಲ ಒದಗಿಸುವಿಕೆಯಲ್ಲಿ ತೊಂದರೆಯಾಗಿರುತ್ತದೆ. ಈ ಕಾರಣಗಳಿಂದಾಗಿ ಯೋಜನೆಗಳ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬವಾಗಿದ್ದು, ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿರುವುದಿಲ್ಲ. |
| ಈ) | ಸರ್ಕಾರದಿಂದ ನಿರ್ಮಿಸಿದ ವಸತಿ ಸಮುಚ್ಛಯಗಳ ನಿರ್ವಹಣೆಯನ್ನು ಸರ್ಕಾರದಿಂದಲೇ ನಿರ್ವಹಣೆ ಮಾಡಲಾಗುವುದೇ ಅಥವಾ ಹಂಚಿಕೆಗೊಂಡವರಿಂದ/ಖಾಸಗಿಯವರಿಂದ ನಿರ್ವಹಣೆ ಮಾಡಲಾಗುವುದೇ; | ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)-ಎ.ಎಚ್.ಪಿ ಘಟಕದಡಿ ನಿರ್ಮಿಸುತ್ತಿರುವ ವಸತಿ ಸಮುಚ್ಛಯಗಳನ್ನು ನಿರ್ವಹಣಾ ಅವಧಿ ಪೂರ್ಣಗೊಳ್ಳುವವರೆಗೆ ಗುತ್ತಿಗೆದಾರರೇ ನಿರ್ವಹಿಸಬೇಕಾಗಿರುತ್ತದೆ. ತದನಂತರ ನಿವಾಸಿಗಳ ಕಲ್ಯಾಣ ಸಂಘದ ವತಿಯಿಂದ ನಿರ್ವಹಣೆ ಕೈಗೊಳ್ಳಬೇಕಾಗಿರುತ್ತದೆ. |
| ಉ) | ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿರುವ ವಸತಿ ಯೋಜನೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | 2019-20 ರಿಂದ ಈವರೆಗೆ ವಿವಿಧ ವಸತಿ ಯೋಜನೆಯಡಿ ದಾವಣಗೆರೆ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶದ ವ್ಯಾಪ್ತಿಯಲ್ಲಿ 19356 ಮನೆಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 5245 ಮನೆಗಳು ಪೂರ್ಣಗೊಂಡಿದ್ದು, 5400 ವಿವಿಧ ಹಂತದ ಪ್ರಗತಿಯಲ್ಲಿದ್ದು, 8455 ಪ್ರಾರಂಭವಾಗಬೇಕಾಗಿರುತ್ತದೆ. ಇನ್ನುಳಿದಂತೆ 256 ಮನೆಗಳನ್ನು ವಿವಿಧ ಕಾರಣಗಳಿಗಾಗಿ ತಡೆಹಿಡಿಯಲಾಗಿದೆ. ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ :ವಇ 41 ಹೆಚ್‌ಎಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ - 1

## Annexure-1 for LAQ Starred Question No.737

| Sl.No | Year | District | ULB / City | IA | Constituency | Approved DU's | Completed | Under Progress | Unstarted |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 12 | 13 |
| 1 | 2019-20 | Bengaluru Urban | Kempanahalli & Singanayakanahalli (BDA Limit) | RGHCL-ULB | Yelahanka | 330 | 238 | 63 | 29 |
| 2 | 2020-21 | Bengaluru Urban | Gunjur, Bangalore | RGHCL-ULB | Mahadevapura | 1008 | 0 | 928 | 80 |
| 3 | 2020-21 | Bengaluru Urban | Marenahalli, Bangalore | RGHCL-ULB | Byatarayanapur | 480 | 0 | 480 | 0 |
| 4 | 2020-21 | Chitradurga | Chitradurga CMC | RGHCL-ULB | Chitradurga | 1001 | 0 | 858 | 143 |
| 5 | 2020-21 | Chitradurga | Hiriyur TMC | RGHCL-ULB | Hiriyur | 1248 | 0 | 0 | 1248 |
| 6 | 2020-21 | Chitradurga | Challakere TMC | RGHCL-ULB | Challakere | 1008 | 0 | 1008 | 0 |
| 7 | 2020-21 | Chitradurga | Holalkere TP | RGHCL-ULB | Holalkere | 504 | 0 | 0 | 504 |
| 8 | 2021-22 | Raichur | Raichur CMC | RGHCL-ULB | Raichur | 2419 | 0 | 0 | 2419 |
| 9 | 2021-22 | Shivamogga | Soraba TP | RGHCL-ULB | Sorab | 288 | 0 | 0 | 288 |
| 10 | 2019-20 | Bengaluru Rural | Doddaballapura CMC | ULB-PKGB | Doddaballapura | 34 | 0 | 34 | 0 |
| 11 | 2019-20 | Chikkaballapura | Gowribidanur TMC | ULB-PKGB | Gauribidanur | 22 | 22 | 0 | 0 |
| 12 | 2019-20 | Chikkaballapura | Gowribidanur TMC | ULB-PKGB | Gauribidanur | 11 | 0 | 11 | 0 |
| 13 | 2019-20 | Chikkaballapura | Chintamani CMC | ULB-PKGB | Chintamani | 18 | 18 | 0 | 0 |
| 14 | 2019-20 | Chikkaballapura | Chintamani CMC | ULB-PKGB | Chintamani | 18 | 18 | 0 | 0 |
| 15 | 2021-22 | Chikkamagaluru | Tarikere TMC | ULB-PKGB | Tarikere | 15 | 0 | 15 | 0 |
| 16 | 2019-20 | Davanagere | Davanagere CC | ULB-PKGB | Davanagere | 38 | 0 | 0 | 38 |
| 17 | 2021-22 | Kodagu | Virajpet TP | ULB-PKGB | Virajpet | 8 | 0 | 8 | 0 |
| 18 | 2021-22 | Mandya | Mandya CMC | ULB-PKGB | Mandya | 16 | 0 | 16 | 0 |
| 19 | 2021-22 | Mandya | Maddur TMC | ULB-PKGB | Maddur | 23 | 0 | 0 | 23 |
| 20 | 2021-22 | Mandya | Belluru TP | ULB-PKGB | Nagamangala | 7 | 0 | 0 | 7 |
| 21 | 2019-20 | Mysuru | Bannur TMC | ULB-PKGB | T Narasipura | 14 | 14 | 0 | 0 |
| 22 | 2019-20 | Tumakuru | Tumakuru CC | ULB-PKGB | Tumkur Urban | 70 | 52 | 0 | 18 |
| 23 | 2021-22 | UttaraKannada | Karwara (Ankola) | ULB-PKGB | Karwar | 8 | 0 | 0 | 8 |
| 24 | 2021-22 | UttaraKannada | Dandeli CMC | ULB-PKGB | Haliyal | 12 | 12 | 0 | 0 |
| 25 | 2021-22 | UttaraKannada | Sirsi CMC | ULB-PKGB | Sirsi | 18 | 0 | 12 | 6 |
| 26 | 2021-22 | UttaraKannada | Ankola TP | ULB-PKGB | Karwar | 7 | 0 | 0 | 7 |
| 27 | 2021-22 | UttaraKannada | Bhatkal TMC | ULB-PKGB | Bhatkal | 7 | 0 | 0 | 7 |
| 28 | 2021-22 | UttaraKannada | Honnavar TP | ULB-PKGB | Kumata | 1 | 1 | 0 | 0 |
| 29 | 2021-22 | UttaraKannada | Mundgod TP | ULB-PKGB | Yellapur | 4 | 4 | 0 | 0 |
| 30 | 2021-22 | UttaraKannada | Kumta TMC | ULB-PKGB | Kumata | 5 | 5 | 0 | 0 |
| 31 | 2021-22 | UttaraKannada | Yellapura TP | ULB-PKGB | Yellapur | 12 | 0 | 12 | 0 |
| 32 | 2021-22 | UttaraKannada | Jali TP | ULB-PKGB | Bhatkal | 7 | 0 | 7 | 0 |
| 33 | 2019-20 | Vijayapura | Vijayapura CC | ULB-PKGB | Bijapur | 60 | 0 | 60 | 0 |
| | | | Total | | | 8721 | 384 | 3512 | 4825 |

## ಅನುಬಂಧ-2

### "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ಕಳೆದ ಮೂರು ವರ್ಷಗಳಲ್ಲಿ ವಸತಿ ಸಮುಚ್ಚಯಗಳ ನಿರ್ಮಾಣಕ್ಕೆ ಕಂದಾಯ ಇಲಾಖೆಯಿಂದ ನಿಗಮಕ್ಕೆ ಮುಫತ್ತಾಗಿ ಮಂಜೂರು ಮಾಡಿ ಹಸ್ತಾಂತರಿಸಿಕೊಂಡು ಯೋಜನೆಯನ್ನು ಕೈಗೆತ್ತಿಕೊಂಡಿರುವ ಸರ್ಕಾರಿ ಜಮೀನುಗಳ ವಿವರಗಳು

| ಕ್ರ. ಸಂ | ಸ್ಥಳ | ಸ.ನಂ | ವಿಸ್ತೀರ್ಣ (ಎ-ಗು) |
|---|---|---|---|
| 1 | ಶೆಟ್ಟಿಹಳ್ಳಿ<br>ದಾಸರಹಳ್ಳಿ | 59 | 5–30 |
| 2 | ಮುತ್ತಗದಹಳ್ಳಿ<br>ಯಲಹಂಕ | 22 | 11–31 |
| 3 | ಕಟ್ಟಿಗೇನಹಳ್ಳಿ<br>ಬ್ಯಾಟರಾಯನಪುರ | 28 | 5–07 |
| 4 | ಅಗ್ರಹಾರಪಾಳ್ಯ<br>ಯಲಹಂಕ | 29 | 10–24 |
| 5 | ಮುತ್ತಗದಹಳ್ಳಿ<br>ಯಲಹಂಕ | 20 | 5–05 |
| 6 | ತಮ್ಮರಸನಹಳ್ಳಿ<br>ಹೆಸರಘಟ್ಟ | 10 | 8–00 |
| 7 | ಕಡತನಮಲೆ<br>ಹೆಸರಘಟ್ಟ | 116 | 7–00 |
| 8 | ಹುಣ್ಣಿಗೆರೆ<br>ದಾಸನಪುರ | 109 | 6–07 |
| 9 | ಸಿಂಗನಾಯಕನಹಳ್ಳಿ<br>ಯಲಹಂಕ | 111 | 3–30 |
| 10 | ನಾಗದಾಸನಹಳ್ಳಿ<br>ಯಲಹಂಕ | 63 | 6–01 |
| 11 | ಬಿಳಿಜಾಜಿ<br>ಯಲಹಂಕ | 27 | 18–00 |
| 12 | ಕುಂಬಾರಹಳ್ಳಿ<br>ಯಲಹಂಕ | 8 | 11–00 |
| 13 | ಬೈಯ್ಯಪ್ಪನಹಳ್ಳಿ<br>ಬ್ಯಾಟರಾಯನಪುರ | 80 | 03–20 |
| | ಒಟ್ಟು | | 101–35 |

01/23

ಮುಖ್ಯ ಅಭಿಯಂತರರು
ರಾ.ಗಾಂ.ವ.ನಿ.ನಿ

# ಅನುಬಂಧ-3

## ಫಲಾನುಭವಿಗಳು ಸ್ವತ: ನಿರ್ಮಿಸಿಕೊಳ್ಳುತ್ತಿರುವ ಮನೆಗಳ ವಿವರ :-

| ಯೋಜನೆಯ ಹೆಸರು | ಮಂಜೂರಾದ ಮನೆಗಳು | ಪೂರ್ಣ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗಬೇಕಾದ ಮನೆಗಳು | ಬ್ಲಾಕ್ /ತಡೆಹಿಡಿಯಲಾದ ಮನೆಗಳು |
|---|---|---|---|---|---|
| ಬಸವ ವಸತಿ ಯೋಜನೆ | 5160 | 977 | 2281 | 1902 | 0 |
| ಡಾ. ಬಿ.ಆರ್ ಅಂಬೇಡ್ಕರ್ ವಸತಿ ಯೋಜನೆ (ಗ್ರಾ) | 1937 | 237 | 793 | 907 | 0 |
| ದೇವರಾಜು ಅರಸು ವಿಶೇಷ ವಸತಿಯೋಜನೆ (ಗ್ರಾ) | 2071 | 328 | 450 | 1248 | 45 |
| ಪಿ.ಎಂ.ಎ.ವೈ (ಜಿ) | 384 | 112 | 58 | 3 | 211 |
| ವಾಜಪೇಯಿ ವಸತಿ ಯೋಜನೆ | 495 | 92 | 174 | 229 | 0 |
| ಡಾ. ಬಿ.ಆರ್ ಅಂಬೇಡ್ಕರ್ ವಸತಿ ಯೋಜನೆ (ನ) | 143 | 17 | 54 | 72 | 0 |
| ಪಿ.ಎಂ.ಎ.ವೈ (ಯು)-Non convergence | 1977 | 637 | 427 | 913 | 0 |
| **ಒಟ್ಟು** | **12167** | **2400** | **4237** | **5274** | **256** |

## ಗುಂಪು ಮನೆ(AHP)ಗಳ ವಿವರ :-

| ಯೋಜನೆಯ ಹೆಸರು | ಮಂಜೂರಾದ ಮನೆ ಗಳು | ಪೂರ್ಣ ಮನೆಗಳು | ಪ್ರಗತಿಯಲ್ಲಿರುವ ಮನೆ ಗಳು | ಪ್ರಾರಂಭವಾಗ ಬೇಕಾದ ಮನೆಗಳು | ಬ್ಲಾಕ್ ಆದ ಮನೆಗಳು |
|---|---|---|---|---|---|
| ಪಿ.ಎಂ.ಎ.ವೈ (ಯು) ಎ.ಎಚ್.ಪಿ | 5069 | 1907 | 1038 | 2124 | 0 |
| ರಾಜೀವ್ ಆವಾಸ್ ಯೋಜನೆ | 2120 | 938 | 125 | 1057 | 0 |
| **ಒಟ್ಟು** | **7189** | **2845** | **1163** | **3181** | **0** |
| **ಒಟ್ಟಾರೆ** | **19356** | **5245** | **5400** | **8455** | **256** |